## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 20-04-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ-76 ಗಾಯತ್ರಿನಗರ** **ಸಮಯ: ಬೆಳಗ್ಗೆ : 11:00 ಘಂಟೆಗೆ**

ದಿನಾಂಕ:20-04-2022 ರಂದು ವಾರ್ಡ್ ಸಂಖ್ಯೆ: 76ರ ಏಪ್ರಿಲ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು, ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-76 ಗಾಯತ್ರಿನಗರ |
| 2 | ಸತೀಶ್‌ಕುಮಾರ್.ಬಿ, ಸಹಾಯಕ ಅಭಿಯಂತರರು, ವಾರ್ಡ್-76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ನಾಗರಾಜಯ್ಯ, ಕಿರಿಯ ಆರೋಗ್ಯ ಪರಿವೀಕ್ಷರು |
| 4 | ಎನ್. ಬಸವರಾಜ್, ಡಿಡಬ್ಲ್ಯುಎಸ್‌ಎಸ್‌ಜಿ |
| 5 | ಶ್ರೀನಿವಾಸ್.ಬಿ ಮಾರ್ಷಲ್ |
| 6 | ಕೆ. ಗೋವಿಂದರಾಜು, ಸ್ಯಾನಿಟರಿ ದಫೇದಾರ್ |
| 7 | ಡಾ// ಅಲೀನಾ, ವೈದ್ಯಾಧಿಕಾರಿಗಳು |
| 8 | ಮಂಜುನಾಥ್.ಜಿ, ಆರೋಗ್ಯ ಪರಿವೀಕ್ಷರು |
| 9 | ಸಂತೋಷ್.ಆರ್, ಕೆಲಸ ಪರಿವೀಕ್ಷರು |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ :**

- ಮಾರ್ಕೆಟ್, ಕನ್ಸರ್ವೆನ್ಸಿ ರೈಲ್ವೆ ಸಮನಾಂತರ ರಸ್ತೆ ಸ್ಮಶಾನ, ಈ ಎಲ್ಲಾ ಸ್ಥಳಗಳನ್ನು ಹೆಚ್ಚು ಮುತುವರ್ಜಿ ವಹಿಸಿ ಸ್ವಚ್ಛಗೊಳಿಸಲು ಸೂಚಿಸಲಾಯಿತು.

➢ ಕಾಂಪ್ಯಾಕ್ಟರನ್ನು ಪೊಲೀಸ್ ಸಿಬ್ಬಂದಿ ಬಂದು Fitness Certificate ಹಾಗೂ ಇನ್ನಿತರೆ ದಾಖಲೆಗಳನ್ನು ಪರಿಶೀಲಿಸಿರುತ್ತಾರೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ. ಕಸ ವಿಂಗಡಣೆ ಸಮರ್ಪಕವಾಗಿ ನಡೆಯುತ್ತಿದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.

➢ ಹರಿಶ್ಚಂದ್ರ ಘಾಟ್‌ನಲ್ಲಿ ಕಾಮಗಾರಿ ಇಲಾಖೆಯೊಂದಿಗೆ Intensive Cleaning ಹಮ್ಮಿಕೊಳ್ಳಲು ಸೂಚಿಸಲಾಗಿರುತ್ತದೆ.

➢ ಕನ್ಸರ್ವೆನ್ಸಿಗಳಲ್ಲಿ ಕಸ ವಿಲೇವಾರಿ ದೂರು ಹೆಚ್ಚಾಗಿದ್ದು, ಸ್ವಚ್ಛತೆ ನೋಡಿಕೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಲಾಗಿರುತ್ತದೆ. ಕನ್ಸರ್ವೆನ್ಸಿಗಳಲ್ಲಿ ಕಸ ಹಾಕುವವರಿಗೆ ದಂಡ ವಿಧಿಸಲು ಸೂಚಿಸಲಾಗಿರುತ್ತದೆ.

**BWSSB ಇಲಾಖೆ:**

➢ ಕನ್ಸರ್ವೆನ್ಸಿಗಳಲ್ಲಿ ಒಳಚರಂಡಿ Leakageನ್ನು ಸರಿಪಡಿಸಲು ಸೂಚಿಸಲಾಗಿರುತ್ತದೆ.

➢ BWSSB ಮಾಡಿರುವ ರಸ್ತೆ ಅಗೆತಗಳನ್ನು ಅದರ ವತಿಯಿಂದಲೇ ಪುನಃಶ್ಚೇತನ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಆದೇಶಿಸಿದ್ದು, ಅದರಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.

**ಆರೋಗ್ಯ ಇಲಾಖೆ:**

➢ ಕೋವಿಡ್‌ನ 4ನೇ ಅಲೆ ಬರುವ ಸಾಧ್ಯತೆಯಿದ್ದು, ಸೂಕ್ತ ಜಾಗೃತ ಮೂಡಿಸಲು ವೈದ್ಯಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

➢ ಕೋವಿಡ್ ಲಸಿಕೆ ಕಾರ್ಯಕ್ರಮ ಜಾರಿಯಲ್ಲಿದ್ದು, ಕೋವಿಡ್ ಪ್ರಕರಣಗಳು ಯಾವುದು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಕೋವಿಡ್‌ಗಾಗಿ ಮೀಸಲಿದ್ದ ಸಿಬ್ಬಂದಿಯನ್ನು ಗಣನೀಯವಾಗಿ ಕಡಿಮೆ ಮಾಡಿರುವುದಾಗಿ ತಿಳಿದು ಬಂದಿರುತ್ತದೆ.

➢ ಪ್ರಾಥಮಿಕ ಆರೋಗ್ಯ ಕೇಂದ್ರದ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು ಇಲ್ಲಿ ಜನೌಷಧಿ ಕೇಂದ್ರ ಹಾಗೂ ಎಲ್ಲ ರೀತಿಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿರುವುದಾಗಿ ತಿಳಿಸಿರುತ್ತಾರೆ.

**ಅರಣ್ಯ ಇಲಾಖೆ:**

➢ ಮಳೆಗಾಲವು ಬರುತ್ತಲಿರುವುದರಿಂದ ವಾರ್ಡ್-76ರ ವ್ಯಾಪ್ತಿಯಲ್ಲಿ ಹಲವು ಕಡೆ ಮರದ ರೆಂಬೆಗಳನ್ನು Trimming ಮಾಡುವ ಅವಶ್ಯಕತೆ ಇರುವುದರಿಂದ ಕೂಡಲೇ ರೆಂಬೆಗಳ Trim ಹಾಗೂ Trimming ಬಗ್ಗೆ ಕ್ರಮಕೈಗೊಳ್ಳಲು ಅರಣ್ಯ ಇಲಾಖೆಗೆ ಸೂಚಿಸಲು ನಿರ್ಧರಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| **ಕಾರ್ಯದರ್ಶಿ,** | **ಅಧ್ಯಕ್ಷರು** |
| ಸಹಾಯಕ ಅಭಿಯಂತರರು, ವಾರ್ಡ್-76 | ನೋಡಲ್ ಅಧಿಕಾರಿಗಳು, ವಾರ್ಡ್-76 |
| ಗಾಯತ್ರಿನಗರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ | ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ |